# ಮಾತು, ಬರಿಮಾತು

ಮಾತಿಗೆ ಮೊದಲು ನಗು, ಮಾತಾಡಿದ ನಂತರವೂ ನಗು ಕಾಜೊಲ್ ಶೈಲಿ. ಮಾತಿಗೆ ಒಮ್ಮೆ ವ್ಯಂಗ್ಯ, ನಂತರ ಟೀಕೆ, ಮತ್ತೆ ಹಳೆಯ ನೆನಪುಗಳನ್ನು ಕೆದಕುವುದು ಗಾಳಿಸುದ್ದಿಗಳು ಎದ್ದಿದ್ದು ಎಲ್ಲಿಂದ, ಹರಡಿದ್ದು ಹೇಗೆ, ನಿಭಾಯಿಸಿದ್ದು ಹೇಗೆ? ಇಂಥ ಪ್ರಶ್ನೆಗಳು ಟ್ವಿಂಕಲ್ ಬತ್ತಳಿಕೆಯಲ್ಲಿರುತ್ತವೆ.

**Two much**ಎಂಬ ಟಾಕ್ ಶೋಗೆ ಈ ಇಬ್ಬರು ಜೊತೆಯಾಗಿದ್ದಾರೆ. ಎರಡು ವಿಭಿನ್ನ ದೃಷ್ಟಿಕೋನಗಳ ಅತಿಥಿಗಳನ್ನು ಕರೆಯಿಸಿ ಹರಟುತ್ತಾರೆ. ಅಮೀರ್ ಖಾನ್ ಹಾಗೂ ಸಲ್ಮಾನ್ ಖಾನ್ ಜೊತೆಗೂಡಿ ಈ ಶೋ ಆರಂಭಿಸಿದರು. ಕರಣ್ ಜೋಹರ್ ಮತ್ತು ಜಾಹ್ನವಿ ಕಪೂರ್ ಅವರಿದ್ದ ಎಪಿಸೋಡಿನ ಕೆಲ ತುಣುಕುಗಳು ವೈರಲ್ ಆಗಿವೆ. ಜಾಹ್ನವಿ ಕಪೂರ್ ಸಂಗಾತಿಯನ್ನು ಮೋಸಗೊಳಿಸುವುದರ ಬಗ್ಗೆ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ದೈಹಿಕವಾಗಿ ಇನ್ನೊಬ್ಬರೊಂದಿಗೆ ಇರುವುದು, ಮಾನಸಿಕವಾಗಿ ಮತ್ತೊಬ್ಬರನ್ನು ಪ್ರೀತಿಸುವುದು ಎರಡೂ ವಂಚನೆಗಳೇ ಎನ್ನುವ ಅವರ ಮಾತನ್ನು ಕಾಜೊಲ್, ಕರಣ್ ಮತ್ತು ಟ್ವಿಂಕಲ್ ಅಲ್ಲಗಳೆಯುತ್ತಾರೆ. ಜಾಹ್ನವಿ ತಮ್ಮ ಏರು ಜವ್ವನದಲ್ಲಿರುವುದರಿಂದ ನಿಷ್ಠೆಯ ತತ್ವಗಳನ್ನು ಮಾತಾಡುತ್ತಾರೆ. 50ರ ಅಂಚನ್ನು ತಲುಪಲಿ ಆಗ ಮೋಸದ ವ್ಯಾಖ್ಯಾನವೇ ಬದಲಾಗುತ್ತದೆ ಎಂದು ಟ್ವಿಂಕಲ್ ಅದರಲ್ಲಿ ಹೇಳುತ್ತಾರೆ.

ಗೋವಿಂದಾ ಮತ್ತು ಚಂಕಿಪಾಂಡೆಯನ್ನು ಕರೆದು ಮಾತಾಡಬೇಕೆಂದುಕೊಂಡ ಸಂಚಿಕೆಗೆ ಸಾಕಷ್ಟು ಶ್ರಮವಹಿಸಬೇಕಾಯ್ತು. ಗೋವಿಂದಾ ಫೋನೆತ್ತಿರಲಿಲ್ಲ. ಕಾಜೊಲ್ ಅವರ ಮನೆಗೇ ಹೋಗಿ ಆಹ್ವಾನಿಸಬೇಕಾಯಿತು. ಗೋವಿಂದಾ ಮತ್ತು ಚಂಕಿ ಒಂದು ಸಮಯದಲ್ಲಿ ಬಾಲಿವುಡ್ ಅನ್ನು ಆಳಿದವರು. ಅವರು ಸಿನಿಮಾಲೋಕದಲ್ಲಿ ನೆಲೆನಿಂತ ಬಗೆಯನ್ನು, ಸಂಕಷ್ಟದ ಸಮಯವನ್ನು ಸಮಾಧಾನದಿಂದ ನಿಭಾಯಿಸಿದ್ದನ್ನೂ ಈ ಸಂಚಿಕೆಯಲ್ಲಿ ಹೇಳಿದ್ದಾರೆ.

ಬಾಲಿವುಡ್‌ನ ತಾರೆಗಳೆಲ್ಲ ಸುಖದ ಸುಪ್ಪತ್ತಿಗೆಯಲ್ಲಿರುತ್ತಾರೆ ಎಂದು ಜನಸಾಮಾನ್ಯರು ಅಂದುಕೊಂಡಿರುತ್ತಾರೆ. ಅವರಿಗಿರುವ ಸಮಸ್ಯೆಗಳೇ ನಮಗೂ ಇವೆ. ನಾವೂ ಅವಮಾನ, ಅನುಮಾನ, ಮೋಸ, ವಂಚನೆ, ನಿರಾಶೆ ಹತಾಶೆಗಳನ್ನೆಲ್ಲ ಅನುಭವಿಸುತ್ತೇವೆ. ಅವನ್ನು ನಿಭಾಯಿಸಿದ ಬಗೆಯನ್ನು ನೋಡುಗರಿಗೆ ದಾಟಿಸುತ್ತಿದ್ದೇವೆ ಎಂದು ಟ್ವಿಂಕಲ್ ತಮ್ಮ ಶೋ ಬಗ್ಗೆ ವಿವರಿಸಿದ್ದಾರೆ. ಈ ಟಾಕ್ ಶೋ ಅಮೇಜಾನ್‌ಪ್ರೈಮ್‌ನಲ್ಲಿ ಪ್ರತಿ ಗುರುವಾರ ಹೊಸ ಸಂಚಿಕೆಯನ್ನು ತರುತ್ತಿದೆ. ■



ಕಾಜೊಲ್


# ಕರಣ್ ಸಂಗಾತಿ ಮನೀಷ್ ಮಲ್ಹೋತ್ರಾ?




ಟ್ವಿಂಕಲ್ ಖನ್ನಾ

'ನನ್ನ ಪ್ರೀತಿಯ ಬಗ್ಗೆ ಏನು ಕೇಳ್ತೀರಿ, ಒಂದೊಳ್ಳೆ ಸಾಂಗತ್ಯವಿತ್ತು. ಇದೆ. ಆದರೆ ಸಂಗಾತಿ ಸಿನಿಲೋಕದಿಂದ ಇಲ್ಲ' ಎಂದು ಕರಣ್ ಜೋಹರ್ ಟ್ವಿಂಕಲ್ ಕಾಜೊಲ್ **Two much** ಶೋದಲ್ಲಿ ಮಾತನಾಡುವಾಗ ತಮ್ಮ ಪ್ರೀತಿಯ ಕುರಿತು ಹೃದಯ ಬಿಚ್ಚಿಟ್ಟಿದ್ದಾರೆ.

ಕರಣ್ ತನ್ನ ಸಂಗಾತಿ, ಸಾಂಗತ್ಯದ ಬಗ್ಗೆ ಎಲ್ಲಿಯೂ ಮಾತನಾಡುತ್ತಿರಲಿಲ್ಲ. ಇದೇ ಮೊದಲಿಗೆ ತಮ್ಮ ಸಖ ಸಿನಿಲೋಕದಿಂದಲ್ಲ ಎಂದೊಡನೆ ಎಲ್ಲರ ದೃಷ್ಟಿಯೂ ವಸ್ತ್ರವಿನ್ಯಾಸಕ ಮನೀಷ್ ಮಲ್ಹೋತ್ರಾ ಕಡೆ ತಿರುಗಿದೆ.



ಮನೀಷ್ ಮಲ್ಹೋತ್ರಾ



ಕರಣ್ ಜೋಹರ್

ಮನೀಷ್ ಮಲ್ಹೋತ್ರಾ ಅವರ ಎಲ್ಲ ವಸ್ತ್ರ ಸಂಗ್ರಹಗಳ ರ್‍ಯಾಂಪ್ ವಾಕ್‌ಗೆ ಕರಣ್ ಹಾಜರಿದ್ದೇ ಇರುತ್ತಾರೆ. ಕರಣ್ ಜೋಹರ್ ಅವರ ಎಲ್ಲ ಪ್ರೊಜೆಕ್ಟ್, ಸಿನಿಮಾಗಳಿಗೆ ಮನೀಷ್ ಮಲ್ಹೋತ್ರಾ ವಸ್ತ್ರವಿನ್ಯಾಸಕರಾಗಿರುತ್ತಾರೆ. ಅವರಿಬ್ಬರೂ ಸಿನಿಮಾರಂಗದಲ್ಲಿ ಕೂಡಿಯೇ ಬೆಳೆದಿದ್ದಾರೆ. ಇಬ್ಬರಿಗೂ ಒಂದೇ ಸ್ನೇಹಿತರ ವಲಯವಿದೆ. ಆತ್ಮೀಯ ಸ್ನೇಹ ಸಖ್ಯದಲ್ಲಿಯೇ ತಮ್ಮ ಸಾಂಗತ್ಯವನ್ನೂ ಕಂಡುಕೊಂಡಿದ್ದಾರೆಯೇ ಎಂಬುದು ಬಾಲಿವುಡ್‌ನ ಅಂಗಳದಲ್ಲಿರುವ ಚರ್ಚೆಯಾಗಿದೆ.

ಕರಣ್‌ನ ಆತ್ಮೀಯ ವಲಯದಲ್ಲಿದ್ದವರಿಗೆ ಈ ಸಖ್ಯದ ಸ್ವರೂಪ ಗೊತ್ತಿದ್ದರೂ ಯಾರೂ ಈ ಬಗ್ಗೆ ಎಲ್ಲಿಯೂ ಮಾತಾಡಿಲ್ಲ.

ಕಾಜೊಲ್ ಮತ್ತು ಕರಣ್ ಜೋಹರ್ ನಡುವಿನ ಆತ್ಮೀಯ ಸ್ನೇಹಕ್ಕೆ 2018ರಲ್ಲಿ ಬಿರುಕು ಮೂಡಿತ್ತು. ಅಜಯ್ ದೇವಗನ್ ನಿರ್ಮಾಣದ ಶಿವಾಯ್ ಚಿತ್ರ ಹಾಗೂ ಕರಣ್ ಜೋಹರ್ ಅವರ ಏಯ್ ದಿಲ್ ಹೈ ಮುಷ್ಕಿಲ್ ಚಿತ್ರಗಳೆರಡೂ ಒಂದೇ ದಿನ ಬಿಡುಗಡೆಯಾಗಿದ್ದವು. ಸಿನಿಮಾ ವಿಮರ್ಶಕನೊಬ್ಬನಿಗೆ ಹಣ ನೀಡಿ ಕರಣ್ ತಮ್ಮ ಚಿತ್ರದ ಬಗ್ಗೆ ಹೊಗಳಿಸಿಕೊಂಡಿದ್ದರು ಎಂದು ಆ ವಿಮರ್ಶಕ ಟ್ವೀಟ್ ಮಾಡಿದ್ದ. ಆ ಟ್ವೀಟ್ ಅನ್ನು ಕಾಜೊಲ್ ರಿ ಟ್ವೀಟ್ ಮಾಡಿದ ನಂತರ ಅವರ ನಡುವೆ ಮಾತು ಮರೆತಿತ್ತು. ನಂತರ ಅವರಿಬ್ಬರ ನಡುವೆ ಮಾತು ಮೊದಲು ಶುರು ಮಾಡಿದ್ದು ಕಾಜೊಲ್. ಈ ಸ್ನೇಹ ಮತ್ತು ಸಾಂಗತ್ಯದ ಬಗ್ಗೆ ಮಾತಾಡುವಾಗಲೇ ಕರಣ್ ತಮ್ಮ ಸಖ್ಯ, ಸಂಗಾತಿ, ಸಾಂಗತ್ಯದ ಬಗ್ಗೆ ಮನಬಿಚ್ಚಿ ಮಾತಾಡಿದ್ದಾರೆ. ■